ತಿಳಿಯುವ ಉದ್ದೇಶವಿತ್ತು. ಇವಳು ಯಾವ ರಾಜರ ಮನೆತನದವಳು ಅನ್ನುವ ಕುತೂಹಲವಾಗಿಬಿಟ್ಟಿತು! ಚಂಪಾ, 'ನಿನ್ನ ಕಥೆ, ಪುರಾಣದ ಹೀರೋಗಳ ಬೇಟೆ ಒಂಥರಾ ಆದರೆ, ನನ್ನದೊಂದು...' ಅಂದು ಮುಖ ಕೆಳಗೆ ಮಾಡಿದಳು.

ಅಷ್ಟು ಹೊತ್ತಿಗೆ ಅವಳೇ, 'ಅಯ್ಯೋ ನನ್ನ ಊರು ನಿನ್ನದರಂಗೆ ಕೆರೆ ತೊರೆಯ ತಡಿಯಲ್ಲಿ ಇರುವ ಸುಂದರ ಊರಲ್ಲ ಅನ್ನು. ನಮ್ಮ ಸಿಟಿಯಿಂದ ಆಚೆ ನಲವತ್ತು ಐವತ್ತು ಮೈಲು ದೂರದಲ್ಲಿ ತುಂಗಭದ್ರಾ ನದಿ ಹರಿಯುತ್ತಿದೆ ನಿಜ. ಆದರೆ, ಅದರ ತಡಿಯಲ್ಲಿ ನಾನು ನಡೆದಾಡಿದವಳಲ್ಲ, ನೀರ ಮೇಲೆ ದೋಣಿಯಲ್ಲಿ ತೇಲಾಡಿದವಳಲ್ಲ. ನಾವು ತಾತ ಮುತ್ತಾತನ ಕಾಲದಿಂದಲೂ ಉಳ್ಳವರ ಹೆಣ್ಣುಮಕ್ಕಳು, ಆಚೆ ಎಲ್ಲೂ ಹೋಗುವಂತಿಲ್ಲ. ಮನೆಯ ಕಾಂಪೌಂಡು ಎಷ್ಟು ದೊಡ್ಡದು ಗೊತ್ತ? ಎಂಟು ಹತ್ತು ಅಡಿ ಎತ್ತರದ್ದು. ಅದರ ಮೇಲೆ ಇಂಗ್ಲಿಷಿನ ಟಿ ಆಕಾರದ ಕಬ್ಬಿಣದ ಸರಳು. ಅದಕ್ಕೆ ಆಚೆ ಈಚೆ ಮುಳ್ಳು ತಂತಿ. ರಾತ್ರಿಯ ಹೊತ್ತು ಮನೆ ಕಾಯುವುದಕ್ಕೆ ಆರು ನಾಯಿ ಇವೆ. ಅವನ್ನು ಹಗಲೆಲ್ಲ ಕಾಯುವುದಕ್ಕೆ ಒಬ್ಬ ಆಳು. ಅವನು ಮನೆಯ ಆಚೆ ಈಚೆ ನಾಯಿ ವಾಕಿಂಗ್ ಮಾಡಿಸಿಕೊಂಡು ಇರಬೇಕು. ನನಗೆ ಅವಳ ಬಂಗಲೆಯ ವರ್ಣನೆ ಕೇಳಿ ಕಾಂಪೌಂಡಿಗೆ ಕೂರಿಸಿರಬಹುದಾದ ಮುಳ್ಳು ತಂತಿಯ ಮೇಲೆ ಬಿದ್ದಂತಾಯಿತು.

'ಅಂದರೆ, ನಿಮ್ಮ ಫಾದರ್ ಅಷ್ಟು ಶ್ರೀಮಂತರಾ' ಅಂದೆ.

'ಅದೇ ನಮ್ಮಪ್ಪ ಎಂ.ಎಲ್.ಎ., ಅಷ್ಟೇ ಅಲ್ಲ, ಹಾಲಿ ಮಂತ್ರಿ. ಮನೆ ಮುಂದೆ ದಿನ ಬೆಳಗಾದರೆ ನೂರಾರು ಜನ. ಒಳಗಡೆ ಅಲ್ಲ, ಹೊರಗಡೆ. ಜನ ಕೂತುಕೊಳ್ಳೋದಕ್ಕೆ ಅಂತಲೇ ಬಂಗಲೆ ಆಚೆ ದೊಡ್ಡ ಹಾಲ್ ಕಟ್ಟಿಸಿದ್ದಾರೆ. ಅಲ್ಲಿ ದಿನ ಬೆಳಗಾದರೆ ನಮ್ಮ ಅಪ್ಪ ನಡೆಸುವ ಗಣಿ ಕೆಲಸದವರು, ಮೇಸ್ತ್ರಿಗಳು, ಮ್ಯಾನೇಜರು ಇರುತ್ತಾರೆ. ಕೂಲಿ ಜಾಸ್ತಿ ಮಾಡಿ ಅಂತಾನೋ, ಊರಿಗೆ ಹೋಗಿ ಬತ್ತೀವಿ ಲಾರಿ ಕಳಿಸಿ ಅಂತಾ ಏನೇನೋ ಅವರ ಪ್ರಾಬ್ಲಮ್. ಗಣಿ ಜಾಗದಿಂದ ಜನರನ್ನ ಲಾರಿಯಲ್ಲಿ ತುಂಬಿಕೊಂಡು ಹೋಗಿ ಅವರವರ ಊರಿಗೆ ಬಿಡೋದು ಕರಕೊಂಡು ಬರೋದು ಇದ್ದೇ ಇರುತ್ತೆ. ಒಂದೊಂದು ಸರ್ತಿ ಹೆಂಗಸರೂ ಬರುವುದುಂಟು. ಅವರದೂ ಏನೇನೋ ಕಾಯಿಲೆ ಕಸಾಲೆ ಅಂತ ಕಾಸು ಕೇಳುವರು. ಇದ್ದವರದು, ಸತ್ತವರದು ಎಂತೆಂಥದೋ ಅಹವಾಲು. ಅದೇನೂ ನಂಗೆ ಗೊತ್ತಾಗಲ್ಲ ಅಂದುಕೋ. ಹೊರಗೆ ಹೋದರೆ ತಾನೆ ಗೊತ್ತಾಗುವುದಕ್ಕೆ. ನಾನು ಮನೆ ಒಳಗೇನೆ ಓಡಾಡಲ್ಲ. ಕೂತ ಕಡೆಗೆ ಬೆಳ್ಳಿ ಊಟದ ತಟ್ಟೆ ತಂದುಕೊಡುವವಳು ಅಡುಗೆಯವಳು. ಕಸ ಗುಡಿಸುವವಳು ಕುರ್ಚಿಯ ಕೆಳಗೆ ನನ್ನ ಕಾಲುಗಳಿಗೆ ಶೀತವೆಂದು ಫುಟ್‌ರಗ್ ಹಾಸುತ್ತಾಳೆ. ನಡೆಯುವಲ್ಲಿ ನೋಡಿಕಂಡು ಓಡಾಡಮ್ಮ ಜಾರಿಬಿದ್ದೀಯೇ ಅನ್ನುತ್ತಾಳೆ...'

'ಮತ್ತೆ ನೀನು ಪ್ಯಾಸೆಂಜರ್ ರೈಲು ಹತ್ತಿ ಯಾಕೆ ಬಂದೆ, ಕಾರಿನಲ್ಲೇ ಬರಬಹುದಿತ್ತಲ್ಲ' ಅಂದೆ.

'ಕಾರು ಯಾಕೆ ಹೆಲಿಕಾಪ್ಟರಿನಲ್ಲೇ ಬರಬೋದಿತ್ತು. ಕಾರಿನಲ್ಲೇ ಹೋಗುತ್ತೇನೆ ಅಂತ ಸುಳ್ಳು ಹೇಳಿ ರೈಲಿನಲ್ಲಿ ಬಂದೆ. ಕಾರಿನಲ್ಲಿ ಓಡಾಡಿ ಬೋರು. ನನಗೇನೂ ರೂಢಿಯಿಲ್ಲದ್ದಕ್ಕೇ ಆವತ್ತು ರಿಕ್ಷಾದಲ್ಲಿ ದುಡ್ಡು ಇದ್ದ ಪರ್ಸ್ ಮರೆತದ್ದು' ಅಂದಳು.

ನಾನು, 'ಒಂದು ವೇಳೆ ದುಡ್ಡು ಕಳಕೊಂಡದ್ದು, ಪ್ಯಾಸೆಂಜರ್ ರೈಲಿನಲ್ಲಿ ಬಂದದ್ದು ನಿಮ್ಮ ತಂದೆಗೆ ಗೊತ್ತಾಗಿದ್ರೆ ಡ್ರೈವರ್ ಕಳಿಸಿ ಇಲ್ಲಿಂದ ನಿನ್ನನ್ನೂ ಲಗೇಜನ್ನೂ ಪ್ಯಾಕ್ ಮಾಡಿಸಿ, ಓದೋದು ಬ್ಯಾಡ ಏನೂ ಬೇಡ ಅಂತ ತಿರುಗಿ ಮನೇಲಿ ಇರಿಸಿಕೊಳ್ಳುತ್ತಿದ್ದರು ನೋಡು' ಎಂದೆ.

'ಅಯ್ಯೋ ಹಾಗೆ ಕರೆಸಿಕೊಳ್ಳುವುದಕ್ಕೆ ನನ್ನ ತಂದೆ ಮನೆಯಲ್ಲಿ ಇಲ್ಲವಲ್ಲ...'

'ಹಾಗೆಂದರೆ?'

ಒಂದು ಘಳಿಗೆ ತಡೆದು, 'ಅವರು ಜೈಲಿನಲ್ಲಿದ್ದಾರೆ. ದಿನದಲ್ಲಿ ಒಂದೊಂದು ಘಳಿಗೆಯಾದರೂ ಎಲ್ಲ ಮರೆಯಬೇಕು ಅಂತ ನಾನು ಇಷ್ಟು ದೂರ ರೈಲಿನ ಜನರೊಂದಿಗೆ ಬಂದದ್ದು. ಈಗ ಮತ್ತೆ ಅದೇ ಸೆರೆಮನೆಗೆ...' ಅಂದಳು.

ಕೈಯಲ್ಲಿದ್ದ ವ್ಯಾನಿಟಿಬ್ಯಾಗ್‌ನಿಂದ ಕರ್ಚೀಫ್ ತೆಗೆದವಳು, ಮುಖ ತಗ್ಗಿಸಿ ಅತ್ತ ತಿರುಗಿಸಿದಳು... ಚಂಪಾ ಒಡೆಯರ್ ಕಲ್ಲು ಬೆಂಚಿನ ಮೇಲೆ ಕುಳಿತಿದ್ದರೂ ನೆಲಕ್ಕೆ ಕುಸಿದಂತಿದ್ದಳು. ●